**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE - 560 003**

# ಎಸ್.ಎಸ್.ಎಲ್.ಸಿ ಮುಖ್ಯ ಪರೀಕ್ಷೆ – 2021

## S.S.L.C MAIN EXAMINATION – 2021

## ಪತ್ರಿಕೆ / Paper – 02

**ವಿಷಯ : ಪ್ರಥಮ ಭಾಷೆ + ದ್ವಿತೀಯ ಭಾಷೆ + ತೃತೀಯ ಭಾಷೆ / ಎನ್.ಎಸ್.ಕ್ಯೂ.ಎಫ್**

**Subjects : First Language + Second Language + Third Language / NSQF**

**(CCERF/CCERR/CCEPF/CCEPR/NSR/NSPR)**

**Key Answers**

**ಉತ್ತರಗಳ ಸಂಕೇತ**

**ಸಂಕೇತ ಸಂಖ್ಯೆ : 33-K** — **Code No. : 33-K**

**ಒಟ್ಟು ಪ್ರಶ್ನೆಗಳ ಸಂಖ್ಯೆ : 40+40+40=120]** — **[Total No. of Questions : 40+40+40=120**

## ದ್ವಿತೀಯ ಭಾಷೆ ಕನ್ನಡ

---

**ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ/ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ನಿಮಗೆ ನೀಡಿರುವ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಸರಿಯಾದ ಆಯ್ಕೆಯನ್ನು ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್ನಿನಿಂದ ಶೇಡ್ ಮಾಡಿರಿ.** **[40×1=40]**

**41)** ಇವರಲ್ಲಿ ಗಿಳಿಗೆ ವರವನ್ನು ನೀಡಿದ ದೇವತೆ

A) ವರುಣ B) ಇಂದ್ರ

C) ಕುಬೇರ D) ಶಿವ

**ಉತ್ತರ :** (B) ಇಂದ್ರ

**42)** "ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು" ಎಂದವರು

A) ಸರ್ವಜ್ಞ B) ಕುಮಾರವ್ಯಾಸ

C) ಬಸವಣ್ಣ D) ಕುವೆಂಪು

**ಉತ್ತರ :** (A) ಸರ್ವಜ್ಞ

**43) ಇಂದ್ರನಿಗೆ ಮೆಚ್ಚುಗೆಯಾದ ಗಿಳಿಯ ಗುಣ**

A) ಸಹಬಾಳ್ವೆ B) ಸಹಕಾರ

C) ಸ್ನೇಹ D) ತತ್ವನಿಷ್ಠೆ

**ಉತ್ತರ :** (D) ತತ್ವನಿಷ್ಠೆ

**44) ನೀವು ಓದಿರುವ ಪಾಠದಲ್ಲಿ ತಿಳಿದಿರುವಂತೆ ಸೈನಿಕ ಬಲವನ್ನು ಹೀಗೆಂದು ಕರೆಯಲಾಗಿದೆ**

A) ಅಸಿ B) ಮಸಿ

C) ಕೃಷಿ D) ಬೆಳವಣಿಗೆ

**ಉತ್ತರ :** (A) ಅಸಿ

**45) ಬಾಲಕ ಪುಟ್ಟರಾಜರ ಪ್ರತಿಭೆಯನ್ನು ಮೆಚ್ಚಿ ಅವರ ಮಾವ ನೀಡಿದ ಒಂದು ಸಂಗೀತದ ಆಸ್ತಿ**

A) ತಬಲ B) ಪಿಟೀಲು

C) ಹಾರ್ಮೋನಿಯಂ D) ಕೊಳಲು

**ಉತ್ತರ :** (C) ಹಾರ್ಮೋನಿಯಂ

**46) ಖಾದಿ ಬಟ್ಟೆಯನ್ನು ತೊಡುವ ಮೂಲಕ ಪುಟ್ಟರಾಜರು ಕೈ ಜೋಡಿಸಿದ ಆಂದೋಲನ**

A) ಸ್ವದೇಶಿ ಆಂದೋಲನ

B) ಕ್ವಿಟ್ ಇಂಡಿಯಾ

C) ವಿದೇಶಿ ಆಂದೋಲನ

D) ಉಪ್ಪಿನ ಆಂದೋಲನ

**ಉತ್ತರ :** (A) ಸ್ವದೇಶಿ ಆಂದೋಲನ

**47) ಹಕ್ಕಿಗಳು ಗೂಡನ್ನು ನಿರ್ಮಿಸುವ ಮುಖ್ಯ ಉದ್ದೇಶ**

A) ರಕ್ಷಣೆಗಾಗಿ B) ವಿನೋದಕ್ಕಾಗಿ

C) ಜನರನ್ನಾಕರ್ಷಿಸಲು D) ಸಮಯ ಕಳೆಯಲು

**ಉತ್ತರ :** (A) ರಕ್ಷಣೆಗಾಗಿ

**48) ಅಮೆರಿಕಾದ ಈ ಹಕ್ಕಿ ಗಾಲ್ಫ್ ಚೆಂಡು, ನೀಲಿ ಸೀಸೆಯ ಚೂರು, ಈರುಳ್ಳಿ ಸಿಪ್ಪೆಗಳಿಂದ ಗೂಡನ್ನು ಅಲಂಕರಿಸಿತ್ತು**

A) ಸಗ್ಗದ ಹಕ್ಕಿ B) ಗೀಜುಗ

C) ಗ್ಯಾನೆಟ್ ಕಡಲ ಹಕ್ಕಿ D) ನೀಲಿ ಸಾಮ್ರಾಟ

**ಉತ್ತರ :** (C) ಗ್ಯಾನೆಟ್ ಕಡಲ ಹಕ್ಕಿ

**49) 'ನನ್ನ ಗೋಪಾಲ' ಈ ಪ್ರಸಿದ್ಧ ನಾಟಕ ರಚನಕಾರರು**

A) ಅ.ರಾ. ಮಿತ್ರ B) ರಮೇಶ ಗೌಡ

C) ಕುವೆಂಪು D) ಬಸವರಾಜ ಸಾದರ

**ಉತ್ತರ :** (C) ಕುವೆಂಪು

**50) ಬನದ ಗೋಪಾಲನ ಕೈಯಲ್ಲಿದ್ದ ಸಂಗೀತ ವಾದನ**

A) ತುತ್ತೂರಿ B) ಡಮರುಗ

C) ವೀಣೆ D) ಕೊಳಲು

**ಉತ್ತರ :** (D) ಕೊಳಲು

**51) ಗೋಪಾಲನಿಗೆ ಬಣ್ಣ ಬಣ್ಣದ ಹೂಗಳು ಕಾಣಿಸಿಕೊಂಡ ಬಗೆ**

A) ನವಿಲುಗಳು ಗರಿಬಿಚ್ಚಿ ನರ್ತಿಸಿದಂತೆ

B) ನಕ್ಷತ್ರಗಳು ಹೊಳೆಯುವಂತೆ

C) ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ

D) ರಂಗೋಲಿಯ ಚಿತ್ತಾರದಂತೆ

**ಉತ್ತರ :** (C) ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ

**52) 'ಏಣಿ' ಕವಿತೆಯು ಸಾರುವ ಜೀವನ ಮೌಲ್ಯ ಇದಾಗಿದೆ**

A) ಹಣ, ಅಧಿಕಾರ, ಅಂತಸ್ತು ಶಾಶ್ವತವಲ್ಲ

B) ಹಣ ಅಧಿಕಾರವೇ ಮುಖ್ಯ

C) ಗುಣಕ್ಕಿಂತಲೂ ಹಣವೇ ಮುಖ್ಯ

D) ಅಧಿಕಾರ ಇದ್ದಾಗ ಚಲಾಯಿಸಬೇಕು

**ಉತ್ತರ :** (A) ಹಣ, ಅಧಿಕಾರ, ಅಂತಸ್ತು ಶಾಶ್ವತವಲ್ಲ

**53) ಬುದ್ಧನು ಅರಿತುಕೊಂಡ ಬದುಕಿನ ಸತ್ಯ**

A) ಧ್ಯಾನ ಮಾಡುತ್ತ ಕೂರುವುದು ಒಳ್ಳೆಯದು

B) ಕಾಡಿನಲ್ಲಿ ವಾಸ ಮಾಡಬೇಕು

C) ಹೇಳಿಕೊಂಡು ದಾನ ಮಾಡುವುದು ದೊಡ್ಡದು

D) ತಪಸ್ಸಿಗಿಂತ ಜೀವನ ಪ್ರೀತಿ ದೊಡ್ಡದು

**ಉತ್ತರ :** (D) ತಪಸ್ಸಿಗಿಂತ ಜೀವನ ಪ್ರೀತಿ ದೊಡ್ಡದು

**54) ಸಿದ್ಧಾರ್ಥನು ಬುದ್ಧನಾದ ಸಂದರ್ಭದಲ್ಲಿ**

A) ದೀಪಗಳು ತಾನಾಗೇ ಬೆಳಗಿದವು

B) ಸೂರ್ಯನು ಬೇಗನೆ ಮೂಡಿದನು

C) ಬೋಧಿವೃಕ್ಷದಲ್ಲಿ ಮಹಾಬೆಳಕು ಕಂಡಿತು

D) ಸುಮಂಗಲಿಯರು ಆರತಿ ಬೆಳಗಿದರು

**ಉತ್ತರ :** (C) ಬೋಧಿವೃಕ್ಷದಲ್ಲಿ ಮಹಾಬೆಳಕು ಕಂಡಿತು

**55) ಕವಿಗಳು ತಿಳಿಸುವಂತೆ ಕರ್ಪೂರವು ನಮಗೆ ತಿಳಿಸುವ ಮಾನವೀಯ ಮೌಲ್ಯ ಇದಾಗಿದೆ**

A) ತಾನೂ ಸುಟ್ಟು ಬೇರೆಯವರನ್ನು ಸುಡಬೇಕು

B) ನಮ್ಮ ಜೀವನ ಕರ್ಪೂರದಂತೆ ಪರಿಮಳ ಭರಿತವಾಗಿರಬೇಕು

C) ತಾನು ಸುಡದೆ ಬೇರೆಯವರನ್ನು ಸುಡಬೇಕು

D) ತಾನು ಸುಡುತ್ತಲೇ ಇರಬೇಕು

**ಉತ್ತರ :** (B) ನಮ್ಮ ಜೀವನ ಕರ್ಪೂರದಂತೆ ಪರಿಮಳ ಭರಿತವಾಗಿರಬೇಕು

**56) ಸದ್ದು ಮಾಡದೇ ಬಾಳಬೇಕಾದರೆ ನಮ್ಮಲ್ಲಿ ಇರಬೇಕಾದ ಸದ್ಗುಣ**

A) ಮೋಹ B) ನಿರ್ದಯೆ

C) ಶಾಂತಿ D) ಮಮಕಾರ

**ಉತ್ತರ :** (C) ಶಾಂತಿ

**57) ಕಿಡಿ ಸೋಕಿದರೆ ಸಿಡಿದು ಅಬ್ಬರಿಸುವುದು**

A) ಸಿಡಿಮದ್ದು B) ಇಬ್ಬನಿ

C) ಕಿರಣ D) ದೀಪ

**ಉತ್ತರ :** (A) ಸಿಡಿಮದ್ದು

**58) ಕವಿ ತಿಳಿಸುವಂತೆ ನಮ್ಮ ಕರ್ತವ್ಯಗಳನ್ನು ಈ ರೀತಿಯಾಗಿ ಮುಗಿಸಬೇಕು**

A) ಸಿಡುಕು ಮಿಡುಕಿನಿಂದ

B) ಬುಸುಗುಡುವಂತೆ

C) ತಾನೂ ಸುಡುತ್ತ

D) ಶಾಂತಿಯಿಂದ ಬದುಕಿ

**ಉತ್ತರ :** (D) ಶಾಂತಿಯಿಂದ ಬದುಕಿ

**59) ಅಡಿಗರು ತಿಳಿಸುವಂತೆ ಹಗಲಿರುಳು ಹೋರಾಡಬೇಕಾದುದು**

A) ಜೀವನ ನಿರ್ವಹಣೆಗಾಗಿ

B) ಹೆಗ್ಗುರಿಯ ಸಾಧನೆಗಾಗಿ

C) ಉದ್ಯೋಗ ಪಡೆಯಲು

D) ಮನೆ ಕಟ್ಟುವುದಕ್ಕಾಗಿ

**ಉತ್ತರ :** (B) ಹೆಗ್ಗುರಿಯ ಸಾಧನೆಗಾಗಿ

**60) ಜೀವನದಲ್ಲಿ ಗಾಳಿ ಬಂದೆಡೆ ತಿರುಗುವುದು**

A) ಧೀರತನ B) ಕಲಿತನ

C) ಹೇಡಿತನ D) ಸಿರಿತನ

**ಉತ್ತರ :** (C) ಹೇಡಿತನ

**61) ಕೆಸರೊಳಿದ್ದರೂ ಮೇಲೆ ಬಾಂದಳವನ್ನು ನೋಡುವ ಹೂ**

A) ಮಲ್ಲಿಗೆ B) ಜಾಜಿ

C) ಕಮಲ D) ಸಂಪಿಗೆ

**ಉತ್ತರ :** (C) ಕಮಲ

**62) ಕುಣಿಗಲ್ ಕೆರೆಯನ್ನು ನಿಂಬೆ ಹಣ್ಣಿಗೆ ಹೋಲಿಸಿರುವುದು ಈ ಕಾರಣಕ್ಕಾಗಿ**

A) ಕೆರೆ ವಿಶಾಲವಾಗಿರುವುದಕ್ಕೆ

B) ಕೆರೆ ಬಾಗಿರುವುದಕ್ಕಾಗಿ

C) ಕೆರೆಗೆ ಮೆಟ್ಟಿಲಿರುವುದಕ್ಕಾಗಿ

D) ಕೆರೆ ತುಂಬಿರುವುದಕ್ಕಾಗಿ

**ಉತ್ತರ :** (D) ಕೆರೆ ತುಂಬಿರುವುದಕ್ಕಾಗಿ

**63) ಅಕ್ಕಮಹಾದೇವಿಯವರು ತಿಳಿಸಿರುವಂತೆ ಧನವಿದ್ದವರಲ್ಲಿ ಇರಬೇಕಾದ ಗುಣ**

A) ಅಹಂಕಾರ B) ದಯೆ

C) ಮಮಕಾರ D) ಲೋಭ

**ಉತ್ತರ :** (B) ದಯೆ

**64) ಬಸವಣ್ಣನವರು ಈ ಮೌಢ್ಯತೆಯನ್ನು ಖಂಡಿಸಿದ್ದಾರೆ**

A) ದಯೆಯಿಲ್ಲದ

B) ಮರನ ಕಂಡಲ್ಲಿ ಸುತ್ತುವ

C) ನಾನಾ ಕೆರೆ ತೋಡುವ

D) ಗುಣವಿಲ್ಲದ

**ಉತ್ತರ :** (B) ಮರನ ಕಂಡಲ್ಲಿ ಸುತ್ತುವ

**65) ಕೌರವರ ಸೇನೆಯು ಉತ್ತರನಿಗೆ ಈ ರೀತಿಯಾಗಿ ಕಾಣಿಸಿತು**

A) ಸರೋವರದಂತೆ B) ಕೆರೆಯಂತೆ

C) ಸಾಗರದಂತೆ D) ಹೊಳೆಯಂತೆ

**ಉತ್ತರ :** (C) ಸಾಗರದಂತೆ

**66) ನೂರು ಯಾಗಗಳನ್ನು ಮಾಡುತ್ತಿದ್ದವರಿಗೆ ದೊರೆಯುತ್ತಿದ್ದ ಪದವಿ**

A) ಇಂದ್ರ ಪದವಿ B) ರುದ್ರ ಪದವಿ

C) ಚಂದ್ರ ಪದವಿ D) ಬ್ರಹ್ಮ ಪದವಿ

**ಉತ್ತರ :** (A) ಇಂದ್ರ ಪದವಿ

**67) 'ಕಾಯುವುದು ದೇವರ ಕೆಲಸ; ಕೊಲ್ಲುವುದು ರಾಕ್ಷಸರ ಕೆಲಸ' ಎಂಬ ವೈದ್ಯರ ಮಾತಿನ ಅರ್ಥ**

A) ದೇವರ ಕೆಲಸ ಕೊಲ್ಲುವುದೇ ಆಗಿದೆ

B) ದೇವರು ಯಾರನ್ನು ರಕ್ಷಿಸಲಾರ

C) ಕಾಪಾಡುವುದು ದೇವರ ಕೆಲಸವಲ್ಲ

D) ದೇವರು ದಯಾಮಯ ಎಲ್ಲರನ್ನೂ ರಕ್ಷಿಸುತ್ತಾನೆ

**ಉತ್ತರ :** (D) ದೇವರು ದಯಾಮಯ ಎಲ್ಲರನ್ನೂ ರಕ್ಷಿಸುತ್ತಾನೆ

**68) ವೈದ್ಯರು ಮಗುವಿನ ಪ್ರಾಣವನ್ನು ಉಳಿಸಿದ್ದು ಹೀಗೆ**

A) ಮದ್ದು ಸವರಿ

B) ಎಣ್ಣೆ ಹಚ್ಚಿ

C) ನೀರು ಕುಡಿಸಿ

D) ಸೊಪ್ಪಿನ ರಸ ಮಾಡಿ ಔಷಧಿಯೊಂದಿಗೆ ಕುಡಿಸಿ

**ಉತ್ತರ :** (D) ಸೊಪ್ಪಿನ ರಸ ಮಾಡಿ ಔಷಧಿಯೊಂದಿಗೆ ಕುಡಿಸಿ

**69) 'ಬಾಣವನ್ನು' ಪದದಲ್ಲಿರುವ ವಿಭಕ್ತಿ ಪ್ರತ್ಯಯ**

A) ಉ B) ಅನ್ನು

C) ಇಂದ D) ಗೆ

**ಉತ್ತರ :** (B) ಅನ್ನು

**70) ಸವರ್ಣದೀರ್ಘ ಸಂಧಿಗೆ ಉದಾಹರಣೆಯಾದ ಪದ**

A) ಸರ್ವಾಧಿಕಾರಿ B) ಮೇಲೇರು

C) ಬೆನ್ನೆಲುಬು D) ಇತ್ಯಾದಿ

**ಉತ್ತರ :** (A) ಸರ್ವಾಧಿಕಾರಿ

**71) 'ಬೈಗು' ಪದವು ನೀಡುವ ಅರ್ಥ**

A) ಸಂಜೆ B) ಬೆಳಗು

C) ಬೇಗ D) ಮಧ್ಯಾಹ್ನ

**ಉತ್ತರ :** (A) ಸಂಜೆ

**72) 'ನಿಂಬೆಯ ಹಣ್ಣಿನಂತೆ ತುಂಬಿದ ಕುಣಿಗಲ್ ಕೆರೆ' ಇಲ್ಲಿರುವ ಅಲಂಕಾರ**

A) ರೂಪಕಾಲಂಕಾರ B) ಉಪಮಾಲಂಕಾರ

C) ದೃಷ್ಟಾಂತಾಲಂಕಾರ D) ಅರ್ಥಾಲಂಕಾರ

**ಉತ್ತರ :** (B) ಉಪಮಾಲಂಕಾರ

**73) 'ಬರ್ತ್ತಾನೆ' ಪದದ ಗ್ರಾಂಥಿಕ ರೂಪ**

A) ಬತ್ತಾನೆ B) ಬಂದ

C) ಬಂದನು D) ಬರುತ್ತಾನೆ

**ಉತ್ತರ :** (D) ಬರುತ್ತಾನೆ

**74) 'ತಂದಾನು' ಪದದಲ್ಲಿರುವ ಮಾತ್ರೆಗಳ ಸಂಖ್ಯೆ**

A) ಮೂರು B) ನಾಲ್ಕು

C) ಐದು D) ಆರು

**ಉತ್ತರ :** (C) ಐದು

**75) ಕ್ರಿಯಾ ಸಮಾಸಕ್ಕೆ ಉದಾಹರಣೆಯಾಗಿರುವ ಪದ**

A) ಮಧ್ಯರಾತ್ರಿ B) ಹಿಂಡುಗಟ್ಟಿ

C) ಅರಮನೆ D) ಹೊಸರಾಗ

**ಉತ್ತರ :** (B) ಹಿಂಡುಗಟ್ಟಿ

**76) 'ಪೃಥ್ವಿ' ಪದದ ತದ್ಭವ ರೂಪ**

A) ಪೊಡವಿ B) ಅಡವಿ

C) ಬಡವಿ D) ಪದವಿ

**ಉತ್ತರ :** (A) ಪೊಡವಿ

**77) 'ಭಾರತ' ಪದವು ನಾಮಪದದ ಈ ಪ್ರಕಾರಕ್ಕೆ ಸೇರಿದೆ**

A) ಸರ್ವನಾಮ B) ಅಂಕಿತನಾಮ

C) ರೂಢನಾಮ D) ಅನ್ವರ್ಥನಾಮ

**ಉತ್ತರ :** (B) ಅಂಕಿತನಾಮ

**78) 'ನಾನು ಬರೆದೆನು' ಈ ವಾಕ್ಯವಿರುವ ಕಾಲ**

A) ಭೂತಕಾಲ B) ಭವಿಷ್ಯತ್ ಕಾಲ

C) ಸಕಾಲ D) ವರ್ತಮಾನ ಕಾಲ

**ಉತ್ತರ :** (A) ಭೂತಕಾಲ

**79) ತಾಯಿಗೆ ಪತ್ರ ಬರೆಯುವಾಗ ಬಳಸುವ ಸಂಬೋಧನೆ**

A) ತೀರ್ಥರೂಪ B) ಚಿರಂಜೀವಿ

C) ಮಾನ್ಯರೇ D) ಮಾತೃಶ್ರೀ

**ಉತ್ತರ :** (D) ಮಾತೃಶ್ರೀ

**80) "ಮಾತು ಬೆಳ್ಳಿ ಮೌನ ಬಂಗಾರ"–ಈ ಗಾದೆಯ ಅರ್ಥವನ್ನು ಗ್ರಹಿಸಿ ಸೂಕ್ತ ಉತ್ತರವನ್ನು ಗುರ್ತಿಸಿ**

A) ಉತ್ತಮ ಮಾತುಗಾರನಾಗಿರುವುದು

B) ಸುಮ್ಮನೆ ಮೌನವಾಗಿರುವುದು

C) ಮಾತಿಗಿಂತ ಮೌನಕ್ಕೆ ಹೆಚ್ಚು ಮೌಲ್ಯ

D) ಮಾತು, ಮೌನ ಎರಡೂ ಒಳ್ಳೆಯದು

**ಉತ್ತರ :** (C) ಮಾತಿಗಿಂತ ಮೌನಕ್ಕೆ ಹೆಚ್ಚು ಮೌಲ್ಯ